ಶ್ರೀ ಕೆ.ಜೆ. ಜಾರ್ಜ್: ಸನ್ಮಾನ್ಯ ಅಧ್ಯಕ್ಷರೆ, ಅವರ ಮೂರನೇ ಪ್ರಶ್ನೆಗೆ ಈಗಾಗಲೆ ಉತ್ತರ ಕೊಟ್ಟಿದ್ದೇನೆ. ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಯವರ ನಿರ್ದೇಶನದ ಮೇರೆಗೆ ಅವರುಗಳನ್ನು ಆ ಪ್ರದೇಶದಿಂದ ಕರುಣೆಯಿಲ್ಲದೆ ಹೊರ ಹಾಕಲು ನಗರಪಾಲಿಕೆಯು ಪ್ರಯತ್ನಿಸುತ್ತಿರುವುದು ನಿಜವೆ ಎಂದು ಕೇಳಿದ್ದಾರೆ. ಇಲ್ಲ ಎಂದು ಹೇಳಿದ್ದೇನೆ. ಮತ್ತೇ ಅದೇ ಪ್ರಶ್ನೆ ಅವರು ಕೇಳುತ್ತಿದ್ದಾರೆ.

ಶ್ರೀ ಎ.ಕೆ. ಅನಂತಕೃಷ್ಣ : ನನ್ನ ಪ್ರಶ್ನೆ ಏನು ಎಂದು ಅವರಿಗೆ ತಿಳಿವಳಿಕೆ ಮಾಡುತ್ತೇನೆ. " Is it true that all efforts are being made to throw them mercilessly from the area by the corporation authorities on the direction of the Hon'ble Minister for housing and Urban Development." ಎಂದು ಕೇಳಿದ್ದೇನೆ. ಅವರಲ್ಲದಿದ್ದರೆ ಇನ್ನು ಯಾರಿಂದ ಆಯಿತು ಎಂದು ಕೇಳಿದ್ದೇನೆ.

ಅಧ್ಯಕ್ಷರು: ಅದಕ್ಕೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಎ.ಕೆ. ಅನಂತಕೃಷ್ಣ: ಅವರು ಮಾಡಿಲ್ಲ ಎಂದು ಹೇಳುತ್ತಾರೆ. ಮಂತ್ರಿಗಳು ಡೈರೆಕ್ಷನ್ ಕೊಟ್ಟರೇ? ಇಲ್ಲವೇ ಹೌಸಿಂಗ್ ಮತ್ತು ಅರ್ಬನ್ ಡೆವಲಪ್ಮೆಂಟ್ ಸೆಕ್ರೆಟರಿ ಕೊಟ್ಟರೇ?

ಶ್ರೀ ಕೆ.ಜೆ. ಜಾರ್ಜ್: ತಮಗೆ ಗೊತ್ತಿರುವ ಹಾಗೆ ಈ ಮಿಲ್ಲರ್ ಟ್ಯಾಂಕ್ ರೋಡ್‌ನಲ್ಲಿ ಒಂದು ದೊಡ್ಡ ಸ್ಲಂ ಇತ್ತು. ಸರ್ಕಾರದ ವತಿಯಿಂದ ಸಾಕಷ್ಟು ಹಣ ಖರ್ಚು ಮಾಡಿ ಆ ಸ್ಲಮ್ಮನ್ನು ಬೇರೆ ಕಡೆಗೆ ಷಿಫ್ಟ್ ಮಾಡಿದ್ದೇವೆ. ಗೌರ್ನಮೆಂಟ್‌ನಿಂದ ಏನು ಹೇಳಿದ್ದೇವೆಂದರೆ, ಆ ಮಿಲ್ಲರ್ ಟ್ಯಾಂಕ್ ರೋಡ್‌ನಲ್ಲಿ ಈಗ ಅಂಬೇಡ್ಕರ್ ಭವನ ಬರಬೇಕು, ಆದ್ದರಿಂದ ಅಲ್ಲಿ ಹೊಸ ಸ್ಲಂಗಳು ಬರದಂತೆ ನೋಡಿಕೊಳ್ಳಿ ಎಂದು ಹೇಳಿದ್ದೇನೆ. ಈ 72 ಮನೆಗಳು ಯಾವುವಿದೆ ಇವರಿಗೆ ಬೇರೆ ಸೌಕರ್ಯ ಒದಗಿಸಿ ಷಿಫ್ಟ್ ಮಾಡುತ್ತೇವೆ.

ಶ್ರೀ ಎ.ಕೆ. ಅನಂತ ಕೃಷ್ಣ : ಅಧ್ಯಕ್ಷರೇ, ಅವರು ಏನು ಹೇಳುತ್ತಾರೆ....

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ.ಎಚ್. ಪಾಟೀಲ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಜಿಲ್ಲೆಗಳ ಪುನರ್‌ರಚನೆಯ ಬಗ್ಗೆ ವಿವಿಧ ಸಮಿತಿಗಳು ಸರ್ಕಾರಕ್ಕೆ ಸಲ್ಲಿಸಿರುವ ವರದಿಗಳ ಆಧಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮ.

368 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜೌರಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲೆಗಳ ಪುನರ್‌ರಚನೆಯ ಕುರಿತು ಇದುವರೆವಿಗೂ ಯಾವ ಯಾವ ಸಮಿತಿಗಳು ತಮ್ಮ ವರದಿಗಳನ್ನು ಸರ್ಕಾರಕ್ಕೆ ನೀಡಿವೆ?

ಆ) ಈ ಸಮಿತಿಗಳು ನೀಡಿರುವ ವರದಿಯನ್ನು ಅಧ್ಯಯನ ಮಾಡುವ ಸಲುವಾಗಿ ರಚಿಸಿರುವ ಸಂಪುಟದ ಉಪ ಸಮಿತಿ ತನ್ನ ವರದಿಯನ್ನು ಸರ್ಕಾರಕ್ಕೆ ನೀಡಿದೆಯೇ?

ಇ) *ನೀಡಿಲ್ಲದಿದ್ದರೆ ಕಾರಣಗಳೇನು.*

ಈ) *ಬೀದರ್ ಜಿಲ್ಲೆಯ ಚಿಟಗುಪ್ಪ ತಾಲ್ಲೂಕನ್ನು ಹೊಸದಾಗಿ ನಿರ್ಮಿಸುವ ಸಲುವಾಗಿ ಹುಂಡೇಕಾರ್ ಸಮಿತಿ ತನ್ನ ವರದಿ ನೀಡಿ ಎಷ್ಟು ದಿನಗಳಾಯಿತು.*

ಉ) *ಇದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು)

ಅ) ಶ್ರೀ ವಾಸುದೇವರಾವ್ ಆಯೋಗ
ಶ್ರೀ ಹುಂಡೇಕರ್ ಸಮಿತಿ
ಶ್ರೀ ಪಿ.ಸಿ. ಗದ್ದಿಗೌಡರ್ ಸಮಿತಿ.

ಆ) ಇನ್ನೂ ಸಲ್ಲಿಸಬೇಕಾಗಿದೆ.

ಇ) ಅಧಿಕಾರ ವರ್ಗದ ಸಮಿತಿಯ ವರದಿಯನ್ನು ಪರೀಕ್ಷಿಸಲಾಗುತ್ತಿದೆ.

ಈ) 4 ವರ್ಷಗಳು 6 ತಿಂಗಳು.

ಉ) ಆರ್ಥಿಕ, ಭೌಗೋಳಿಕ ಮತ್ತು ಆಡಳಿತಾತ್ಮಕ ಅಂಶಗಳನ್ನು ಅಧಿಕಾರಿ ವರ್ಗದ ಸಮಿತಿಯಿಂದ ಪರಿಶೀಲಿಸಲಾಗುತ್ತಿದೆ.

ದೇವಸ್ಥಾನಗಳ ತಸ್ಡೀಕೆ ಹಣ ಜಾಸ್ತಿ ಮಾಡುವ ಬಗ್ಗೆ.

1256 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದೇವಸ್ಥಾನಗಳ ದೈನಂದಿನ ಕೆಲಸಕಾರ್ಯಗಳಿಗೆ ಈಗ ಕೊಡುತ್ತಿರುವ ತಸ್ಡೀಕೆ ಹಣ ಸಾಲದು ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಅದನ್ನು ಹೆಚ್ಚಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ?*

ಇ) *ಹಾಗಿದ್ದಲ್ಲಿ ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು.*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು.

ಆ) ಸದ್ಯಕ್ಕೆ ಇಲ್ಲ

ಇ) ರಾಜ್ಯದ ಧಾರ್ಮಿಕ ದತ್ತಿ ಸಂಸ್ಥೆಗಳ ನಿರ್ವಹಣೆಗೆ ಏಕರೂಪ ಶಾಸನ ಜಾರಿಗೆ ಬಂದ ನಂತರ ಪರಿಶೀಲಿಸಲಾಗುವುದು.

ತೋಟಗಾರಿಕೆ ಉತ್ಪನ್ನಗಳನ್ನು ವಿದೇಶಗಳಿಗೆ ರಫ್ತು ಮಾಡುವುದು.

1312 - ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ತೋಟಗಾರಿಕೆ ಉತ್ಪನ್ನಗಳನ್ನು ವಿದೇಶಕ್ಕೆ ರಫ್ತು ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ?*

ಆ) *ಇದ್ದಲ್ಲಿ ಇದನ್ನು ಯಾವಾಗ, ಮತ್ತು ಯಾವ ರೀತಿಯಲ್ಲಿ ಕಾರ್ಯಗತ ಗೊಳಿಸಲಾಗುವುದು.?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಂಘ, ಬೆಂಗಳೂರು ಇವರು ನವದೆಹಲಿಯಲ್ಲಿರುವ ಕೃಷಿ ಹಾಗೂ ಸಂಸ್ಕರಿಸಿದ ಆಹಾರ ಪದಾರ್ಥಗಳ ರಫ್ತು ಅಭಿವೃದ್ಧಿ (ಫೆಡಾ) ಮುಖಾಂತರ ತೋಟದ ಉತ್ಪನ್ನಗಳನ್ನು ರಫ್ತು ಮಾಡಲು ಪ್ರಯತ್ನಿಸಿದ್ದು ಈ ದಿಸೆಯಲ್ಲಿ ರಫ್ತು ಪರವಾನಗಿಯನ್ನು ಪಡೆದಿದೆ.